ಪುಸ್ತಕ ಬೆಳೆಸಿಕೊಳ್ಳುತ್ತೆ ಕೈಯಿ
ಪುಳಕಗೊಳ್ಳುತ್ತವೆ ಅಕ್ಷರಗಳು ವಾಕ್ಯಗಳು
ಇಮ್ಮಡಿಸುತ್ತವೆ ಪುಸ್ತಕದ ಪುಟಗಳು
ಪುಟಗಳಲ್ಲಿರುವ ಎಲ್ಲವೂ

ಕೃತಿ ಮತ್ತು ಓದುಗರ ಸಂಬಂಧವನ್ನು ವ್ಯಾಖ್ಯಾನಿಸುತ್ತಿರುವಂತೆ ಕಾಣುತ್ತಿರುವ ಈ ಕವಿತೆ, ಇದನ್ನೂ ಮೀರಿ ಅನುಭವ ಮತ್ತು ಅಭಿವ್ಯಕ್ತಿಯ ಅಖಂಡತೆಯನ್ನು ಅರ್ಥ ಮಾಡಿಕೊಳ್ಳಲು ಹಂಬಲಿಸುತ್ತಿದೆ. ಕಾವ್ಯದ ಶಕ್ತಿಯನ್ನು ತನಗೆ ತಾನೇ ಅರ್ಥ ಮಾಡಿಕೊಳ್ಳುವ ಮೂಲಕ ಕವಿಯಾಗಿ ತನ್ನ ಆತ್ಮವಿಶ್ವಾಸವನ್ನೂ, ಕಾವ್ಯದ ಬಗೆಗಿನ ತನ್ನ ನಂಬಿಕೆಯನ್ನೂ ಇದು ಹೆಚ್ಚಿಸಿಕೊಳ್ಳುತ್ತಿದೆ. ಆದರೆ ಇದು ತನ್ನಷ್ಟಕ್ಕೆ ತಾನೇ ಆಗದೇ, ಕವಿಯೂ ಓದುಗರೂ ಆಗಿಸಿಕೊಳ್ಳಬೇಕಾದ ಮಾಂತ್ರಿಕ ಕ್ರಿಯೆ ಎನ್ನುವ ಅರಿವೂ ಕವಿಗಿದೆ. ಲೋಕ ಸಮಸ್ತವನ್ನೂ ಕಾವ್ಯ ಓದುಗರಿಗೆ ಮರು ಸೃಷ್ಟಿಸಬಲ್ಲದು. ಆಕಾಶ, ನದಿ, ಗಿಡ, ಕಾಡು, ಊರು, ಗಿರಿ– ಈ ಎಲ್ಲವನ್ನೂ ಒಳಗೊಳ್ಳುವ ಪುಸ್ತಕ ದಪ್ಪವಾಗುತ್ತದೆ, ದಪ್ಪವಾಗುವ ಪುಸ್ತಕ ತಾನು ಪುಸ್ತಕ ಎನ್ನುವುದನ್ನೇ ಮರೆತು ಮತ್ತೆ ತಾನು ಪುಸ್ತಕ ಎನ್ನುವುದನ್ನು ಜ್ಞಾಪಿಸಿಕೊಳ್ಳುತ್ತದೆ ಎನ್ನುವುದಂತೂ ಕಲೆಯ ಮತ್ತು ಸಹೃದಯರ ಅತ್ಯಂತ ಸುಂದರವಾದ ಮತ್ತು ಸೃಜನಶೀಲವಾದ ವ್ಯಾಖ್ಯಾನವಾಗಿದೆ. ನನಗೆ ಬಲು ಪ್ರಿಯವಾದ ಕವಿತೆ ಇದು. ಸಂಕಲನದ ಮಹತ್ವದ ಕವಿತೆಯೂ ಹೌದು. ಕೊನೆಗೆ ಪುಸ್ತಕವು ಪುಟಾಣಿಯಾಗಿ ಕುಂಕುಮ ಡಬ್ಬಿಯಾಗಿಬಿಡುತ್ತದೆ. ಇಲ್ಲಿಗೆ ಪುಸ್ತಕ ಮತ್ತು ಓದುಗರ ಸಂಬಂಧ ಸಾರ್ಥಕವಾಯಿತು. ಆದರೆ ಮುಗಿಯಿತೆ? ಕವಿಯ ಕಿವಿ ಮಾತು ಇದು, 'ಹುಶಾರು ಕಳೆದು ಹೋದೀತು ಜೋಪಾನ'.

ಮನುಷ್ಯರ ಕ್ರೌರ್ಯ ಮತ್ತು ಅಸಹಾಯಕತೆಯನ್ನು ಕುರಿತ ಕೆಲವು ಕವಿತೆಗಳು ನಮ್ಮನ್ನು ಕಾಡುವಷ್ಟು ಶಕ್ತವಾಗಿವೆ. 'ಎಲ್ಲಿ ಹೋಯಿತು ರುಂಡ?' ಕವಿತೆಯಲ್ಲಿ, ರುಂಡವೇ ಇಲ್ಲದ ಮುಂಡದ ತನಿಖೆ ನಡೆಸುವ ಪೊಲೀಸರು, ಮುಂದೊಂದು ದಿನ, ಅದಕ್ಕೆ ಯಾವುದೋ ರುಂಡವನ್ನು ತಂದು ಜೋಡಿಸಬಹುದಾದ ಸಾಧ್ಯತೆಯೇ ಮಾನವಕುಲ ತಲುಪಿರುವ ಮತ್ತು ಎಂದಿನಿಂದಲೂ ಇದ್ದೇಇರುವ ಕ್ರೌರ್ಯದ ಎಳೆಯನ್ನು ಸೂಚಿಸುತ್ತದೆ. ಈ ಕ್ರೌರ್ಯ ಮತ್ತು ಇದರ ಹಿಂದಿದ್ದಿರಬಹುದಾದ ಅಧಿಕಾರದ ದಾಹ ಎಲ್ಲವೂ ಸೇರಿ ವ್ಯಕ್ತಿಯನ್ನೂ, ಸಮಷ್ಟಿಯನ್ನೂ ನುಂಗಿ ನೀರು ಕುಡಿಯುತ್ತಿದೆ ಎನ್ನುವ ಸತ್ಯವನ್ನು ಇಲ್ಲಿನ ಕವಿತೆಗಳ ನಾಯಕ ಸ್ವಗತದಂತೆ ತನಗೆ ತಾನೇ ಹೇಳಿಕೊಳ್ಳುತ್ತಿದ್ದಾನೆ. 'ಭಯೋತ್ಪಾದಕ', 'ಅರೆಸ್ಟು ವಾರಂಟ್', 'ಅಳುವುದು', 'ಅಳಬೇಕು ಹೇಗೆ?', 'ಶೋಕಿಸುವ ಸಂಕಟ' ಮೊದಲಾದ ಕವಿತೆಗಳಲ್ಲಿ ಅನುರಣಿತವಾಗುವ ಅಂಶವೆಂದರೆ, ನಾವು ಮನುಷ್ಯರು ಎನ್ನುವ ಕಿರೀಟ ಹೊತ್ತವರು ಸ್ಪಂದನಾಶಕ್ತಿಯನ್ನೇ ಕಳೆದುಕೊಂಡು ಬಿಟ್ಟಿದ್ದೇವೆಯೆ? ಕಣ್ಣೆದುರಿಗಿನ ದುರಂತಗಳಿಗೆ ನಾವು ನೇರ ಭಾಗೀದಾರರಲ್ಲದಿರಬಹುದು, ಆದರೆ ನಮ್ಮ ನಿಷ್ಕ್ರಿಯತೆಯನ್ನು ಏನೆಂದು ಕರೆಯುವುದು? ಇದಕ್ಕೆ ನಮ್ಮೊಳಗಾದರೂ ನಾವು ಉತ್ತರ ಕೊಟ್ಟುಕೊಳ್ಳಬೇಕಲ್ಲವೆ ಎನ್ನುವ ಉದ್ವಿಗ್ನತೆ ಅಪಾರ ಸಂಯಮದಲ್ಲಿ ಸಂಕಟವಾಗಿ ನಮಗೆ ಕೇಳಿಸುತ್ತದೆ, ಕೇಳಿಸಲೇಬೇಕು, ಏಕೆಂದರೆ ನಮ್ಮ ಅವಸ್ಥೆಯೂ ಅದೇ ಆಗಿರುವುದರಿಂದ.

ನಮ್ಮ ಸಂಕೀರ್ಣ ಮನಃಸ್ಥಿತಿ, ಬಗೆಹರಿಯಲಾರದ ದ್ವಂದ್ವ, ನಿರ್ಣಯವನರಿಯದ ಮನದ ದುಗುಡ ಎಲ್ಲವನ್ನೂ 'ನಿನ್ನೆಯ ಕತೆ' ಕವಿತೆ ಆರ್ದ್ರವಾಗಿ ಹೇಳುತ್ತದೆ. ನಿರ್ಣಯ ತೆಗೆದುಕೊಂಡರೆ ಸರಳವಾಗಬಹುದಾದದ್ದನ್ನು ನಾವು ಯಾಕೆ ರಣ ಮಾಡಿಕೊಳ್ಳುತ್ತೇವೆ?